# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1024 |
| ಸದಸ್ಯರ ಹೆಸರು | : | ಶ್ರೀಮತಿ ಬಲ್ಕೀಸ್ ಬಾನು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 17-03-2025 |
| ಉತ್ತರಿಸುವ ಸಚಿವರು | : | ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು. |

*****

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿ ದಿನಾಂಕ: 27.04.1978ರ ಪೂರ್ವದ 3-00 ಎಕರೆವರೆಗಿನ ಎಷ್ಟು ಅರಣ್ಯ ಭೂಮಿ ಒತ್ತುವರಿ ಸಕ್ರಮ ಪ್ರಕರಣಗಳನ್ನು ಗುರುತಿಸಲಾಗಿದೆ; | ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿ ದಿನಾಂಕ: 27.04.1978ರ ಪೂರ್ವದ 3-00 ಎಕರೆವರೆಗಿನ ಒಟ್ಟು 3170 ಪ್ರಕರಣಗಳನ್ನು ಗುರುತಿಸಲಾಗಿದ್ದು, 1454 ಪ್ರಕರಣಗಳ ಸಕ್ರಮಾತಿಗೆ ಜಿಲ್ಲಾಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆ. ಆದರೆ ಯಾವುದೇ ಹಕ್ಕು ಪತ್ರವನ್ನು ವಿತರಿಸಿರುವುದಿಲ್ಲ. |
| ಆ) | ಈ ಪೈಕಿ ಎಷ್ಟು ಪ್ರಕರಣಗಳಿಗೆ ಸಂಬಂಧಿಸಿದಂತೆ ದಿನಾಂಕ: 05.05.1997ರ ಸರ್ಕಾರಿ ಆದೇಶದನ್ವಯ ಸಕ್ರಮಗೊಳಿಸಿ ಹಕ್ಕುಪತ್ರ ಪಟ್ಟಿ ನೀಡಲಾಗಿದೆ; | |
| ಇ) | ಹಕ್ಕುಪತ್ರ ಪಟ್ಟಿ ವಿತರಣೆ ವಿಳಂಬಕ್ಕೆ ಕಾರಣವೇನು; ಹಾಗೂ ಯಾವಾಗ ಪಟ್ಟಿ ವಿತರಿಸಲಾಗುವುದು? (ವಿವರ ನೀಡುವುದು) | ಕೇಂದ್ರ ಸರ್ಕಾರದ ಅನುಮೋದನೆ ಮೇರೆಗೆ ರಾಜ್ಯ ಸರ್ಕಾರವು ಎಫ್‌ಇ 5 ಎಫ್‌ಜಿಎಲ್ 90, ಬೆಂಗಳೂರು, ದಿನಾಂಕ:05.05.1997 ರನ್ವಯ ಅರಣ್ಯ ಒತ್ತುವರಿ ಪ್ರಕರಣಗಳನ್ನು ಕೆಲವು ಷರತ್ತುಗಳನ್ನು ವಿಧಿಸಿ ಸಕ್ರಮಗೊಳಿಸಲು ಅನುಮತಿ ನೀಡಿರುತ್ತದೆ. ಈ ಷರತ್ತುಗಳನ್ವಯ ಜಿಲ್ಲಾಧಿಕಾರಿಗಳು ಅರ್ಹ ಅರಣ್ಯ ಒತ್ತುವರಿದಾರರು ಹಾಗೂ ಒತ್ತುವರಿದಾರರಿಗೆ ಅನ್ವಯಿಸುವ ವಿಸ್ತೀರ್ಣವನ್ನು ಗುರುತಿಸಬೇಕಾಗಿತ್ತು. ಆದರೆ ಗುರುತಿಸುವಿಕೆಯ ಕಾರ್ಯವು ಸಂಪೂರ್ಣಗೊಂಡಿರುವುದಿಲ್ಲ.<br><br>ಕೇಂದ್ರ ಸರ್ಕಾರದ ಪತ್ರದಲ್ಲಿ ತಿಳಿಸಿದ ಷರತ್ತುಗಳಲ್ಲಿ, ಪ್ರಮುಖವಾದ ಷರತ್ತು ಅರ್ಹ ಅರಣ್ಯ ಒತ್ತುವರಿಗಳಿಗೆ ಸಂಬಂಧಿಸಿದಂತೆ ಸಕ್ರಮಗೊಳಿಸುವ ಅರಣ್ಯ ಪ್ರದೇಶಗಳ ಪರ್ಯಾಯವಾಗಿ ಸಮನಾಂತರ ಪರಿಹಾರಾತ್ಮಕ ನೆಡುತೋಪುಗಳಾಗಿ ಅರಣ್ಯೇತ್ತರ ಪ್ರದೇಶಗಳನ್ನು ಗುರುತಿಸಿ, ಕರ್ನಾಟಕ ಅರಣ್ಯ ಕಾಯ್ದೆ-1963ರಡಿ ಮೀಸಲು/ರಕ್ಷಿತ ಅರಣ್ಯ ಎಂದು ಅಧಿಸೂಚಿಸುವುದು ಅಗತ್ಯವಿರುತ್ತದೆ. ಇದರೊಂದಿಗೆ, |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| | | ಪರಿಹಾರಾತ್ಮಕ ನೆಡುತೋಪು ಪ್ರದೇಶಗಳಲ್ಲಿ ನೆಡುತೋಪುಗಳನ್ನು ಬೆಳೆಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ.<br><br>ಇದಲ್ಲದೇ, ಈ ಮೇಲೆ ನಮೂದಿಸಿರುವ ಕೇಂದ್ರ ಸರ್ಕಾರದ ಆದೇಶದಲ್ಲಿ ಕೆಲವೊಂದು ಷರತ್ತುಗಳನ್ನು ಕ್ಷೇತ್ರಮಟ್ಟದಲ್ಲಿ ಅನುಷ್ಠಾನಗೊಳಿಸಲು ಕಷ್ಟಸಾಧ್ಯವಾಗಿರುತ್ತದೆ. ಉದಾಹರಣೆಗೆ, "Regularisation of encroachments will not be done in favour of encroachers in the midst of Forest area, steep slopes or in the wildlife sanctuaries, national parks etc., Such encroachers are to be relocated on the fringe of the forest for which excess area available with eligible encroachers may be utilised"<br><br>ಮುಂದುವರೆದು, ಅರಣ್ಯ ಒತ್ತುವರಿ ಪ್ರದೇಶಗಳನ್ನು ಸಕ್ರಮಗೊಳಿಸಲು ಕರ್ನಾಟಕ ಅರಣ್ಯ ಕಾಯ್ದೆ–1963ರ ಕಲಂ–28ರಲ್ಲಿ ಡಿ–ನೋಟಿಫೈ / ಡಿ–ರಿಸರ್ವ್ ಮಾಡಬೇಕಾಗಿರುತ್ತದೆ. ಆದರೆ ಈ ಮಧ್ಯೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 13.11.2000ರಲ್ಲಿ, IA No. 2 in WP No. 337/1995 and again re iterated by the Supreme Court on 09.02.2004 in IA No. 16 that "...Pending further orders, no de-reservation of Forest/Sanctuaries/National Parks shall be effected" ಎಂದು ಆದೇಶಿಸಿರುತ್ತದೆ.<br><br>ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರವು ವಿಧಿಸಿರುವ ಷರತ್ತುಗಳನ್ವಯ ಜಿಲ್ಲಾಧಿಕಾರಿಗಳು ಗುರುತಿಸಿರುವ ಪ್ರಕರಣಗಳ ಸಮಗ್ರ ಪ್ರಸ್ತಾವನೆಯನ್ನು ಮಧ್ಯಂತರ ಅರ್ಜಿ (I.A) ಮುಖಾಂತರ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿ, ಸಂಬಂಧಿಸಿದ ಅರಣ್ಯ ಪ್ರದೇಶವನ್ನು ಡಿ–ರಿಸರ್ವ್/ಡಿ–ನೋಟಿಫೈ ಮಾಡಲು ಪರಿಶೀಲಿಸಲಾಗುತ್ತಿದೆ. |

**ಎಫ್‌ಇಇ 42 ಎಫ್‌ಜಿಎಲ್ 2025**

(ಈಶ್ವರ ಬಿ ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು